ಉಂಗುರವನ್ನು ಕೊಟ್ಟು ಹಾಕಿಕೊಳ್ಳಲು ಹೇಳಿದರು. ನಾನು ಹಾಗೆಯೇ ಮಾಡಿದೆ. ನನಗೆ ರೆಕ್ಕೆ ಬಂದುಬಿಟ್ಟಿತು. ಅಲ್ಲಿ ಒಬ್ಬಳು ' ಯಾವ ಹೊಸ ಜನರು ಇಲ್ಲಿ ಬರುತ್ತಾರೋ ಅವರಿಗೆ ರೆಕ್ಕೆ ಕೊಡುವುದೆಂದರೆ ನನಗೆ ತುಂಬಾ ಇಷ್ಟ. ಈ ಉಂಗುರ ಹಾಕಿಕೊಂಡವರಿಗೆ ರೆಕ್ಕೆ ಬರುತ್ತದೆ. ಅವರು ಸರೋವರದ ಹೊರಗೆ ಹೋದರೆ, ಅವರಿಗೆ ಆ ರೆಕ್ಕೆ ಇರುವುದಿಲ್ಲ. ಅದು ಪುಡಿ ಪುಡಿಯಾಗಿ ಬಿದ್ದುಬಿಡುತ್ತದೆ' ಎಂದಳು. ಕಳೆದುಹೋದವರೆಲ್ಲಾ ಅಲ್ಲೇ ಇದ್ದಾರೆ' ಎಂದನು.

ಸ್ವಲ್ಪ ಜನ ಅವನ ಮಾತನ್ನು ನಂಬಿದರು. ಮತ್ತೆಲ್ಲ ನಂಬಲೇ ಇಲ್ಲ. ನಂಬಿದವರೆಲ್ಲಾ ಅಲ್ಲಿಗೇ ಹೋಗಿ ನೋಡಿದರು. ಅಪ್ಸರೆಯರ ಬಗ್ಗೆ, ಮಾಯಾಸುರನ ಬಗ್ಗೆ ತಿಳಿದುಕೊಂಡರು. ಕೂಡಲೇ ಒಂದು ಉಪಾಯ ಹೂಡಿದರು. ಅಪ್ಸರೆಯರ ಸ್ನೇಹ ಮಾಡಿ ಅವರ ನೆರವು ಕೋರಿದರು. ಅವರು ಮಾಯಾ ಶಕ್ತಿಯಿಂದ ಒಂದು ಹಣ್ಣಿನ ಮರವನ್ನು ತಯಾರಿಸಿದರು. ಅದರಲ್ಲಿ ಒಂದು ಚಿನ್ನದ ಮಾವಿನ ಹಣ್ಣು ಬಿಟ್ಟಿತು.

ಎಲ್ಲರೂ ಸೇರಿ ರಾಕ್ಷಸ ಮಾಯಾಸುರನನ್ನು ಕರೆದರು. ಅವನಿಗೆ ನಿದ್ದೆ ಬಂದಿತ್ತು. ಎಲ್ಲರೂ ಕೂಡಿ ಕೂಗಿ ಕರೆದರು. ಕೊನೆಗೆ ರಾಕ್ಷಸ ಎದ್ದ. ಅವನಿಗೆ ಮರದಲ್ಲಿ ಬಿಟ್ಟ ಚಿನ್ನದ ಮಾವಿನ ಹಣ್ಣನ್ನು ಕೊಟ್ಟರು. ಹಸಿವಾಗಿದ್ದರಿಂದ ಆತ ತಿಂದುಬಿಟ್ಟ. ಅದನ್ನು ತಿಂದ ಕೂಡಲೇ ಅವನಿಗೆ ನಿದ್ದೆ ಬಂತು. ಅದು ಮಾಯಕವಾದ ಹಣ್ಣು. ಅದನ್ನು ತಿಂದು, ನಿದ್ದೆ ಮಾಡಿ ಎದ್ದ ಮೇಲೆ ಅವರು ಎಷ್ಟೇ ಕೆಟ್ಟವರಾದರೂ ಒಳ್ಳೆಯರಾಗುತ್ತಾರೆ ಎಂದು ಅಪ್ಸರೆಯರು ಹೇಳಿದರು. ಇದೇ ಪ್ರಕಾರ ಅವನು ಒಳ್ಳೆಯವನಾದನು.

ಎಲ್ಲರೂ ಸಂತೋಷಪಟ್ಟರು. ಊರಿನಲ್ಲಿ ಬರಗಾಲ ಹಾಗೇ ಮುಂದುವರಿದು ಊರಿಗೇ ಊರೇ ಸರೋವರದ ಬಳಿ ಬಂದಿತು.. ರಾಕ್ಷಸ ಊರಿನ ಜನರ ಗುಲಾಮನಾದ. ಕೆಟ್ಟ ಕೆಲಸವನ್ನು ಮಾಡದೇ ಒಳ್ಳೆ ಕೆಲಸ ಮಾಡಿಕೊಂಡು, ಸರಿಯಾಗಿ ಬಾಳಿದನು.

**-ಸನ್ಮತಿ ಹೆಗಡೆ, ಶಿರಸಿ**

# ಮಹಾತ್ಮ ಗಾಂಧಿ

ಭಾರತಮಾತೆಯ ಹೆಮ್ಮೆಯ ಸುತ
ಅವನೇ ನಮ್ಮ ರಾಷ್ಟ್ರಪಿತ

ಪೋರಬಂದರಿನ ಮೋಹನದಾಸ
ಮಕ್ಕಳಿಗೆಲ್ಲಾ ಗಾಂಧಿತಾತ
ರವೀಂದ್ರ ಕರೆದರು ಮಹಾತ್ಮನೆಂದು
ಆತ್ಮೀಯರಿಗೆಲ್ಲಾ ಬಾಪೂಜಿ ಆದರು

ಸರ್ವರಿಗೂ ಸಮಬಾಳು
ಸರ್ವರಿಗೂ ಸಮಪಾಲು
ಅವರ ಈ ಧ್ಯೇಯವಾಕ್ಯ
ನಮಗದುವೇ ವೇದವಾಕ್ಯ

ಶಾಂತಿಯಿಂದಲೇ ಆಂಗ್ಲರ
ಹೊಡೆದೋಡಿಸಿದ
ಸ್ವತಂತ್ರ ಭಾರತವ ನಮಗೆ ಕೊಡಿಸಿದ
ಕರಮಚಂದ್ರ ಗಾಂಧೀಜಿಗೆ ಜೈ ಎನ್ನುವಾ
ಅವರ ಪಾದಗಳಿಗೆ ಶಿರಬಾಗಿ ನಮಿಸುವಾ

ಮಹಾತ್ಮರಿಗೆ ಜೈ ಎನ್ನುವಾ
ಅವರ ಮಾರ್ಗದಲಿ ನಾವು ನಡೆಯುವ

**ಬಾಲಾಜಿ ಟಿ.ಆರ್.**



## ನಿಮಗೆಷ್ಟು ಗೊತ್ತು

## ಚ್ಯೂಯಿಂಗ್ ಗಮ್ ಇತಿಹಾಸ



ಅಬಾಲವೃದ್ಧರಾದಿಯಾಗಿ ಪ್ರತಿಯೊಬ್ಬರೂ ಒಂದಲ್ಲ ಒಂದು ಬಾರಿ ಚ್ಯೂಯಿಂಗ್‌ಗಮ್ ಜಗಿದಿರುತ್ತೀರಿ. ಅದು ನೀಡುವ ಸ್ವಾದ ಜಗಿದವರಿಗೇ ಗೊತ್ತು ಅಲ್ಲವೇ. ಅಂದಹಾಗೆ ಸಾಕಾಗುವಷ್ಟು ಜಗಿದು ನಂತರ ಉಗುಳುವ ಈ ಚ್ಯೂಯಿಂಗ್‌ಗಮ್ ಉಂಟಾದ ಬಗೆ ನಿಮಗೆ ಗೊತ್ತೇ? ಅದರ ಹಿಂದೊಂದು ಸ್ವಾರಸ್ಯಕರವಾದ ಕತೆಯಿದೆ.

ಥಾಮಸ್ ಆಡಮ್ಸ್ ಎಂಬ ವಿಜ್ಞಾನಿಯೊಬ್ಬ ರಬ್ಬರ್ ಕುರಿತಾದ ಸಂಶೋಧನೆಯೊಂದನ್ನು ನಡೆಸುತ್ತಿದ್ದನು. ಅವನು ರಬ್ಬರ್‌ಗೆ ಸ್ಯಾಪೋಡಿಲಾ ಎಂಬ ಮರದಿಂದ ಸಂಗ್ರಹಿಸಲಾದ ಹಾಲನ್ನು ಬೆರೆಸಿದನು ಮತ್ತು ಕೆಲಸದಲ್ಲಿ ಮಗ್ನನಾಗಿದ್ದಾಗ ಆಕಸ್ಮಿಕವಾಗಿ ಒಮ್ಮೆ ಅದನ್ನು ಬಾಯಿಯಲ್ಲಿ ಹಾಕಿಕೊಂಡು ಜಗಿದನು. ಅದಕ್ಕೆ ಚಿಕಲ್ ಎಂಬುದಾಗಿ ಹೆಸರಿಸಿ ತಿನ್ನಲು ರುಚಿಕರವಾಗಿದ್ದ ಅದನ್ನು ಆಗಾಗ್ಗೆ ಬಾಯಿಯಲ್ಲಿ ಹಾಕಿಕೊಂಡು ಜಗಿಯುವುದನ್ನು ರೂಢಿಸಿಕೊಂಡನು. ಇದು ಬೆಳಕಿಗೆ ಬಂದು ಮುಂದೆ ಚ್ಯೂಯಿಂಗ್‌ಗಮ್ ಎಂಬ ಹೆಸರಿನಿಂದ ಪ್ರಖ್ಯಾತಿ ಪಡೆಯಿತು. ಮೊದಲ ಮಹಾಯುದ್ಧದ ಸಮಯದಲ್ಲಿ ಅಮೆರಿಕವು ತನ್ನ ಸೈನಿಕರ ಏಕಾಗ್ರತೆ ಹೆಚ್ಚಿಸಲು ಮತ್ತು ಒತ್ತಡವನ್ನು ಕಡಿಮೆಗೊಳಿಸಲು ಚ್ಯೂಯಿಂಗ್‌ಗಮ್ ಪೂರೈಸಲು ಪ್ರಾರಂಭಿಸಿತು. ಮುಂದೆ ಇದೇ ತಂತ್ರವು ಸಾರ್ವಜನಿಕ ವಲಯದಲ್ಲೂ ಪ್ರಚಾರವಾಗಿ ಸಾಕಷ್ಟು ಖ್ಯಾತಿ ಹಾಗೂ ಬಳಕೆಯನ್ನು ಹೊಂದಿತು. ಇಂದಿಗೂ ಕ್ರೀಡಾಪಟುಗಳು ಆಟದಲ್ಲಿ ಏಕಾಗ್ರತೆ ಉಳಿಸಿಕೊಳ್ಳಲು ಚ್ಯೂಯಿಂಗ್‌ಗಮ್ ಜಗಿಯುವುದನ್ನು ಕಾಣಬಹುದಾಗಿದೆ.

**-ಹರೀಶ್**